ಎರಡು. ಸರ್ವೀಸ್ ಅಪಾರ್ಟ್‌ಮೆಂಟಿನಲ್ಲಿ ಕೋಣೆ ಬುಕ್ಕಾಗಿದ್ದರೂ ನಮ್ಮ ಮನೆಯಲ್ಲಿದ್ದದು, ಹೋಟೆಲಿನವರಿಗೆ ವಿವರ ಕೊಡಲು ಹಿಂಜರಿದದ್ದು ಮೂರು. ಇಲ್ಲಿ ನಮ್ಮಲ್ಲಿದ್ದು ವ್ಯಾಪಾರಕ್ಕೆ ಸಂಬಂಧಿಸಿದ ಯಾವುದೇ ಮೀಟಿಂಗನ್ನೂ ಮಾಡದೇ, ವ್ಯವಹಾರ ಕೈಗೊಳ್ಳದೇ ನೇರವಾಗಿ ನೈರೋಬಿಗೆ ಹೋದದ್ದು ನಾಲ್ಕು... ಸಾಕಾ... ಇನ್ನೂ ಬೇಕಾ?"

ಕವಿತಾ ಪ್ರಶ್ನೆಗಳನ್ನು ಕೇಳುತ್ತಾ ಹೋದಂತೆ ಅನಿರುದ್ಧನಿಗೆ ಇದರಲ್ಲಿ ಏನಾದರೂ ಮತಲಬು ಇರಬಹುದೆಂದು ಅನ್ನಿಸಿತ್ತು. ಅವಳು ಒಂದೊಂದು ಪ್ರಶ್ನೆ ಕೇಳಿದಾಗಲೂ, ಅಖ್ತರ ಅಪರಿಚಿತನಾಗುತ್ತಾ ತನ್ನಿಂದ ದೂರ ಹೋಗುತ್ತಿದ್ದ. ಈ ಒಂದು ತಿಂಗಳ ಕಾಲ ಅವರಿಬ್ಬರೂ ಅಖ್ತರನನ್ನು ಚರ್ಚಿಸಿದರು. ನಂತರ ಒಂದು ದಿನ ಮುಂಜಾನೆ ಅನಿರುದ್ಧ ಆಧುನಿಕ ಯುಗದಲ್ಲಿ ಇದ್ದ ಅತ್ಯಂತ ಯಶಸ್ವೀ ಅಸ್ತ್ರವನ್ನು ಅಖ್ತರನ ಮೇಲೆ ಪ್ರಯೋಗಿಸಿದ. ಅವನನ್ನು ಫೇಸ್‌ಬುಕ್ಕಿನಲ್ಲಿ ಅನ್‌ಫ್ರೆಂಡ್ ಮಾಡಿಬಿಟ್ಟ.

★★★

ಅಖ್ತರ ನೈರೋಬಿ ತಲುಪಿದ ನಂತರ ತನ್ನ ಮತ್ತು ಅನಿರುದ್ಧನ ಕಾಲೇಜಿನ ಸಹಪಾಠಿ, ಅನ್–ಆಕ್ಸೆಸರೀಸ್ ಸಂಸ್ಥೆಯ ಭಾಗಸ್ವಾಮಿ ಸುಜಾತಾ ಮುಕುಂದಸಾಗರ (ಉರುಫ್ ಎಸ್ಸೆಮ್ಮೆಸ್)ಗೆ ಒಂದು ಇ–ಮೇಲ್ ಕಳುಹಿಸಿದ. "ಈ ಬಾರಿಯ ಭಾರತಯಾತ್ರೆ ಅಷ್ಟೇನೂ ಚೆನ್ನಾಗಿ ಆಗಲಿಲ್ಲ. ಒಟ್ಟಾರೆ ಅನುಮಾನದ ವಾತಾವರಣದಲ್ಲಿ ನೀನೊಬ್ಬಳೇ ನನ್ನನ್ನು ನಾನಾಗಿ ಕಂಡಿದ್ದು. ಈವನ್ ಅನಿರುದ್ಧ, ನನಗೆ ಅವನೂ ನನ್ನ ಬಗ್ಗೆ ನಂಬಿಕೆಯಿಟ್ಟಿರಲಿಲ್ಲ ಅನ್ನಿಸಿತು. ನಾನು ಮತ್ತೆ ಭಾರತಕ್ಕೆ ಯಾವಾಗ ಬರುತ್ತೇನೋ ಗೊತ್ತಿಲ್ಲ. ಬಟ್ ನೀನು ಏರ್‌ಪೋರ್ಟಿನಲ್ಲಿ ಹೇಳಿದ ಹಾಗೆ ನೈರೋಬಿಗೆ–ಕೀನ್ಯಾಕ್ಕೆ ಬಾ. ಇಲ್ಲಿ ನಿನ್ನ ವ್ಯಾಪಾರವನ್ನು ವಿಸ್ತರಿಸಲು ಸಾಕಷ್ಟು ಸಾಧ್ಯತೆಯಿದೆ. ನಾನೂ ಹಲವರನ್ನು ಪರಿಚಯ ಮಾಡಿಸಿಕೊಡುತ್ತೇನೆ.

